

# ನಾದಮಯ ಕೈವಾರವೆಲ್ಲ



ಕರ್ನಾಟಕದ ಕೈವಾರ ಎಲ್ಲ ಅರ್ಥದಲ್ಲೂ 'ಬಹುತ್ವ ಭಾರತ'ದ ಕೊರಳಿನ ಕಂಠೀಹಾರ. ಸಂಗೀತದ ಮೂಲಕ ಸಮಾನತೆಯ ಮಾದರಿಗಳು ಅಲ್ಲಿ ಸಾಕಾರ. 'ಗುರುಪೂರ್ಣಿಮೆ' ಹಿನ್ನೆಲೆಯಲ್ಲಿ ಜುಲೈ 14ರಿಂದ 16ರವರೆಗೆ ಕೈವಾರದಲ್ಲಿ 'ಗುರುಪೂಜಾ ಸಂಗೀತ ಉತ್ಸವ'. ಈ ಹಾಡುಹಬ್ಬ ದೇಶದ ವಿವಿಧ ಭಾಗಗಳಿಂದ ಸಂಗೀತ ವಿದ್ವಾಂಸರನ್ನೂ ಕಲಾರಸಿಕರನ್ನೂ ಆಕರ್ಷಿಸುತ್ತದೆ.

**■ ಎನ್. ಜಗನ್ನಾಥ ಪ್ರಕಾಶ್**

ಚಿಕ್ಕಬಳ್ಳಾಪುರ ಜಿಲ್ಲೆಯ ಕೈವಾರ ನಾಡಿನ ಪ್ರಸಿದ್ಧ ಅಧ್ಯಾತ್ಮ–ಧಾರ್ಮಿಕ ಕ್ಷೇತ್ರಗಳಲ್ಲೊಂದು. ದೊಡ್ಡ ಬೆಟ್ಟದ ತಪ್ಪಲಿನಲ್ಲಿರುವ ಈ ಪುಟ್ಟಹಳ್ಳಿ ಸಾಂಸ್ಕೃತಿಕ ಮಹತ್ವವನ್ನೂ ಹೊಂದಿರುವಂತಹದ್ದು.

ವರ್ಷದುದ್ದಕ್ಕೂ ಕೈವಾರದಲ್ಲಿ ಒಂದಲ್ಲಾ ಒಂದು ಬಗೆಯ ಸಾಂಸ್ಕೃತಿಕ ಕಾರ್ಯಕ್ರಮ. ಸಂಸ್ಕೃತಿ ಆಸಕ್ತರ ಪಾಲಿಗೆ ಇಲ್ಲಿ ನಡೆಯುವ ಗುರುಪೂಜೆ ಸಂಗೀತ–ಸಂಸ್ಕೃತಿ ಉತ್ಸವವೆಂದರೆ ಚುಂಬಕವಿದ್ದಂತೆ. ಬಾಲಮುರಳಿಕೃಷ್ಣ, ಟಿ.ಎಂ. ಕೃಷ್ಣ, ನೇದನೂರಿ ಕೃಷ್ಣಮೂರ್ತಿ, ಪ್ರಿನ್ಸ್ ರಾಮವರ್ಮ, ಆರ್.ಕೆ. ಶ್ರೀಕಂಠನ್, ಮಲ್ಲಾದಿ ಸಹೋದರರು – ಹೀಗೆ ಖ್ಯಾತನಾಮ ಕಲಾವಿದರೆಲ್ಲ ಈ ಪುಟ್ಟಹಳ್ಳಿಯನ್ನು ಹುಡುಕಿಕೊಂಡು ಬಂದು 'ನಾದಸೇವೆ' ನಡೆಸಿಕೊಟ್ಟಿದ್ದಾರೆ. ಈ ವರ್ಷವೂ 'ಗುರುಪೂರ್ಣಿಮಾ' ಹಿನ್ನೆಲೆಯಲ್ಲಿ ಜುಲೈ 14ರಿಂದ 16ರವರೆಗೆ ಕೈವಾರದಲ್ಲಿ ಗಾಯನ–ವಾದನ–ನೃತ್ಯಗಳ ರಸದೌತಣ.

## ನಾರೇಯಣರ ನುಡಿಹಬ್ಬ

ಭಾರತದ ಮುಖ್ಯ ವಾಗ್ಗೇಯಕಾರರ ಕೃತಿಗಳು ಅನುರಣಿಸುವ ಕೈವಾರ ಉತ್ಸವದಲ್ಲಿ ಹೆಚ್ಚು ಕೇಳಿಬರುವುದು ಕೈವಾರ ನಾರೇಯಣರ ರಚನೆಗಳೇ. ಹಬ್ಬಹರಿದಿನಗಳಲ್ಲಿ, ಭಜನೆಗಳಲ್ಲಿ ತಾತಯ್ಯನವರ ರಚನೆಗಳನ್ನು ಹಾಡುತ್ತ, ಆ ರಚನೆಗಳನ್ನು ಅನುದಿನದ ಬದುಕಿನಲ್ಲಿ ಜೀವಂತವಾಗಿಟ್ಟಿರುವ ಹಾಡುಗಾರರೆಲ್ಲರನ್ನು 'ಗುರುಪೂಜಾ ಸಂಗೀತ ಉತ್ಸವ' ಒಂದೆಡೆ ಸೇರಿಸುತ್ತದೆ. ಎರಡು ದಶಕಗಳ ಹಿಂದೆ ಸಣ್ಣ ಪ್ರಮಾಣದಲ್ಲಿ ಆರಂಭವಾದ ಕಲಾಹಬ್ಬ ಪ್ರಸ್ತುತ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ ಎನ್ನುತ್ತಾರೆ 'ನಾರೇಯಣ ಮಠ'ದ ಮುಖ್ಯಸ್ಥ ಡಾ. ಎಂ.ಆರ್. ಜಯರಾಮ್.

ಸಮಾಜದ ಓರೆಕೋರೆಗಳಿಗೆ ಭಕ್ತಿಯ ಪರಿಹಾರದ ಹಾದಿಯನ್ನು ಸಿದ್ಧಮಾಡಿಕೊಟ್ಟ ನಾರೇಯಣರ ವಿಚಾರಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಗ್ರಾಮ ಸಂಕೀರ್ತನೆ, ಪಾದಯಾತ್ರೆ, ಧರ್ಮ ಚಿಂತನೆಗಳಂತಹ ಕಾರ್ಯಕ್ರಮಗಳನ್ನು ಮಠ ನಡೆಸುತ್ತಿದೆ. 'ನಾದ ಸುಧಾರಸ' ಯೋಜನೆಯಡಿ ಎರಡು ಸಾವಿರಕ್ಕೂ ಹೆಚ್ಚು ಹಳ್ಳಿಗಳಲ್ಲಿ ಭಜನಾ ಮಂಡಳಿಗಳನ್ನು ರೂಪಿಸುವ ಮೂಲಕ ನಾರೇಯಣರ ನಾದಸುಧೆಯ ಪರಂಪರೆ ಮುಂದುವರೆಸುವ ಪ್ರಯತ್ನ ನಡೆದಿದೆ. 'ಕೈವಾರದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಈ ಭಜನಾಮಂಡಳಿಗಳ ಸದಸ್ಯರು ವಿಶೇಷ ಅತಿಥಿಗಳು.